

# ನಿವೇದಿತಾ ಕಲಿಸುವಂತೆ ‘ರಾಷ್ಟ್ರೀಯ ಶಿಕ್ಷಣ’

ಆಂಗ್ಲ ಮೂಲ: **ಎಸ್.ಕೆ. ಚಕ್ರವರ್ತಿ**

ಸಂಗ್ರಹಾನುವಾದ: **ಡಾ. ಹೆಚ್. ಪಾಂಡುರಂಗ ವಿಠಲ**

ಭಾರತದ ನವೋತ್ಥಾನದ ಸಂದರ್ಭದಲ್ಲಿ ಆಧುನಿಕ ಶಿಕ್ಷಣದ ಬಲವಾದ ಗಾಳಿ ಬೀಸುತ್ತಿದ್ದಾಗ, ‘ಭಾರತೀಯ’ವಾದ ಶಿಕ್ಷಣ ಕ್ರಮವನ್ನು ಅಳವಡಿಸುವ ಅಗತ್ಯವನ್ನು ಒತ್ತಿ ಹೇಳಿದ ಮಹಾನ್ ಚಿಂತಕಿ ಸೋದರಿ ನಿವೇದಿತಾ. ಅವಳ ವಿಚಾರಗಳನ್ನು ಆಧುನಿಕ ಸಂದರ್ಭದಲ್ಲಿ ವಿಶ್ಲೇಷಿಸುವ ಲೇಖಕರು ತಮ್ಮ ‘Education in India’ ಗ್ರಂಥದಲ್ಲಿ ಒಂದು ಅಧ್ಯಾಯವನ್ನೇ ನಿವೇದಿತಾ ಶೈಕ್ಷಣಿಕ ವಿಚಾರಗಳಿಗಾಗಿ ಮೀಸಲಿಟ್ಟಿದ್ದಾರೆ. ಅದರ ಕನ್ನಡ ಅವತರಣಿಕೆ ಇಲ್ಲಿದೆ.

ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ಇಂಗ್ಲಿಷ್ ಶಿಕ್ಷಣ ಪದ್ಧತಿಯ ಕಟು ವಿಮರ್ಶಕರಾಗಿದ್ದ ಸ್ವಾಮಿ ವಿವೇಕಾನಂದರು ‘ವಿದ್ಯಾಭ್ಯಾಸವೆಂದರೆ ಮಾನವನಲ್ಲಿ ಈಗಾಗಲೇ ಸುಪ್ತವಾಗಿರುವ ಪರಿಪೂರ್ಣತೆಯನ್ನು ಹೊರತರುವುದು’ ಎಂದು ಹೇಳಿ, ಮಣ್ಣಿನಲ್ಲಿ ಗಿಡ ಬೆಳೆಯುವಂತೆ ಮಗು ತನಗೆ ತಾನೇ ಅರಿವನ್ನು ಮೂಡಿಸಿಕೊಳ್ಳುತ್ತದೆ ಎನ್ನುತ್ತಾರೆ. ಈ ಮಾತು ಅವರ ‘ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಸುಪ್ತವಾಗಿರುವ ದಿವ್ಯತೆಯನ್ನು ಹೊರತರುವುದು’ ಎನ್ನುವುದನ್ನು ಹೋಲುವುದು. ಕಾರಣ ಅವರ ಪ್ರಕಾರ ಧರ್ಮವೆಂದರೆ ಆತ್ಮಸಾಕ್ಷಾತ್ಕಾರವಾಗಿದ್ದು, ಶಿಕ್ಷಣ ಅದರ ಒಂದು ಭಾಗ, ಅಷ್ಟೇ. ‘ಪುರುಷಸಿಂಹರನ್ನಾಗಿಸುವ ವಿದ್ಯಾಭ್ಯಾಸ’ ಎಂದು ಅವರು ಶೀಲನಿರ್ಮಾಣದ ಅಗತ್ಯವನ್ನು ಒತ್ತಿ ಹೇಳುವರು. ‘‘ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೇ ಏಕಾಗ್ರತೆ, ಬರಿಯ ವಿಷಯ ಸಂಗ್ರಹವಲ್ಲ. ಏಕಾಗ್ರತೆಯ ಕರೆಗೆ ಪ್ರಕೃತಿ ಎಲ್ಲ ದ್ವಾರಗಳನ್ನೂ ತೆರೆದು ಜ್ಞಾನಪ್ರವಾಹವನ್ನು ಹೊರಗೆ ಬಿಟ್ಟುಬಿಡುವುದು’’ ಎಂಬ ಇನ್ನೊಂದು ಹೇಳಿಕೆ ಪುರಾತನ ಹಿಂದೂ ಯೋಗಿಗಳ ಈ ಆವಿಷ್ಕಾರವನ್ನು ಪುನಃ ನಮ್ಮ ಶಿಕ್ಷಣಕ್ರಮದಲ್ಲಿ ಬಳಕೆಗೆ ತರಬೇಕು ಎಂಬ ಅವರ ಬಯಕೆಯನ್ನು ಸೂಚಿಸುವುದು. ‘‘ಕೆಲವು ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ಚೆನ್ನಾಗಿ ಉಪನ್ಯಾಸ ಮಾಡಲು ಬಂದುಬಿಟ್ಟರೆ ನಿಮ್ಮ ಪಾಲಿಗೆ ಒಬ್ಬ ಸುಶಿಕ್ಷಿತನಾದಂತಾಯಿತು! ಯಾವ ವಿದ್ಯೆಯ ನೆರವಿನಿಂದ ಇತರ ಸಾಧಾರಣ ಜನರನ್ನು ಜೀವನ ಸಂಗ್ರಾಮವನ್ನೆದುರಿಸಲು ಸಮರ್ಥರನ್ನಾಗಿ ಮಾಡುವುದಕ್ಕಾಗುವುದಿಲ್ಲವೋ, ಯಾವುದು ಮನುಷ್ಯನ ಒಳಗಿನಿಂದ ಚಾರಿತ್ರ್ಯಬಲ, ಪರಸೇವಾತತ್ಪರತೆ, ಸಿಂಹಸದೃಶ ಸಾಹಸ ಇವುಗಳನ್ನು ಹೊರತರಲು ನೆರವಾಗುವುದಿಲ್ಲವೋ ಅದು ವಿದ್ಯೆಯೇನು?’’ ಎನ್ನುವ ಸ್ವಾಮೀಜಿಗೆ ಶಿಕ್ಷಣವು ನಾವು ಬದುಕುವ ಮಾರ್ಗವನ್ನು ತೋರಿ, ಜೀವನದ ಸಮಸ್ಯೆಗಳನ್ನು ಎದುರಿಸಿ ಸ್ವಾವಲಂಬಿಯನ್ನಾಗಿಸಬೇಕು ಎಂಬ ಆಸೆ. ಇತರರ ಆಳ್ವಿಕೆಯಲ್ಲಿ, ಅನುಕರಣೆಯಲ್ಲಿ ಈ ಆದರ್ಶಗಳನ್ನು ಅನುಷ್ಠಾನಕ್ಕೆ ತರುವುದು ಕಷ್ಟವೆಂದೂ ಅವರಿಗೆ ಅನ್ನಿಸಿತ್ತು. ‘‘ನಮ್ಮ ಆದರ್ಶವೇನೆಂದರೆ, ಪಾರಮಾರ್ಥಿಕ ಮತ್ತು ಲೌಕಿಕ ಶಿಕ್ಷಣಗಳೆರಡೂ ನಮ್ಮ ಅಧೀನದಲ್ಲಿರಬೇಕು. ಅವು

ರಾಷ್ಟ್ರೀಯವಾಗಿರಬೇಕು, ಸಾಧ್ಯವಾದ ಮಟ್ಟಿಗೆ ರಾಷ್ಟ್ರೀಯ ಸ್ವರೂಪವನ್ನು ಪಡೆದಿರಬೇಕು. ಇದೊಂದು ವಿರಾಟ್ ಯೋಜನೆಯೇನೋ ಸರಿ. ಅದು ಎಂದಿಗಾದರೂ ಸಾಧ್ಯವಾದೀತೇನೋ ಎಂಬುದು ನನಗೆ ಗೊತ್ತಿಲ್ಲ. ಆದರೆ ನಾವು ಕೆಲಸವನ್ನು ಪ್ರಾರಂಭಿಸಬೇಕು.''

ಹೀಗೆ ಕೆಲಸವನ್ನು ಪ್ರಾರಂಭಿಸಿದ ಸ್ವಾಮೀಜಿಯ ಶಿಷ್ಯರಲ್ಲಿ ಸೋದರಿ ನಿವೇದಿತಾ ಅಗ್ರಮಾನ್ಯಳು. ಜನಜಾಗೃತಿಗೆ ಚಿಕ್ಕಮಕ್ಕಳ ಹಾಗೂ ಸ್ತ್ರೀಯರ ವಿದ್ಯಾಭ್ಯಾಸವೇ ಬುನಾದಿ ಎಂದು ಕಂಡುಕೊಂಡ ಆಕೆ ಬಂದ ಕಷ್ಟಗಳನ್ನೆಲ್ಲ ಎದುರಿಸಿ ಕೊಲ್ಕತಾದಲ್ಲಿ ಶಾಲೆಯೊಂದನ್ನು ತೆರೆದಳು. ಆಕೆ ಹೆಣ್ಣುಮಕ್ಕಳ ಶಾಲೆಯನ್ನು ಆರಂಭಿಸಿದರೂ, ರಾಷ್ಟ್ರೀಯ ಶಿಕ್ಷಣ ಹೇಗಿರಬೇಕೆಂಬ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ಹೊಂದಿದ್ದಳು. ಆ ಬಗ್ಗೆ ಆಕೆ ಬರೆದ 'Hints on National Education' ಎಂಬ ಗ್ರಂಥದ ಪ್ರಬಂಧ, ಭಾಷಣಗಳಿಂದ ನಾವು ಅವಳ ಅನಿಸಿಕೆಗಳನ್ನು ತಿಳಿಯಬಹುದು. ರಾಷ್ಟ್ರೀಯ ಮನೋಭಾವ (National mind) ಎಂಬ ನುಡಿಗಟ್ಟು ನಿವೇದಿತಾಳದು.

ರಾಷ್ಟ್ರೀಯ ಶಿಕ್ಷಣದ ಬಗ್ಗೆ ನಿವೇದಿತಾ ಹೇಳುವ ಮಾತುಗಳಿವು: ''ಈ ಆಧುನಿಕ ಯುಗದಲ್ಲಿ ಇಡೀ ಸಮಾಜಕ್ಕೆ ಸಾಮಾನ್ಯವಾಗಿರುವ ವಿಶಿಷ್ಟ ಯೋಚನೆಗಳು, ಕಲ್ಪನೆಗಳ ಭಾಂಡಾರವೇ ಇದ್ದು, ಮುಂದೆ ತನ್ನ ಪ್ರೌಢ ಜೀವನವನ್ನು ದಕ್ಷತೆಯಿಂದ ನಡೆಸ ಬಯಸುವ ಪ್ರತಿ ವ್ಯಕ್ತಿಗೂ ಅವುಗಳನ್ನು ತಿಳಿಸಬೇಕಾದದ್ದು ಅತಿಮುಖ್ಯ.''

ಪ್ರತಿ ದೇಶಕ್ಕೂ ತನ್ನದೇ ಆದ ಸಾಮಾಜಿಕ ಗುಣವಿಶೇಷಗಳು ಇದ್ದು, ಭಾರತದ ನಾಗರಿಕತೆಯಿಂದ ಹುಟ್ಟಿದ ಯೋಚನೆಗಳ, ಕಲ್ಪನೆಗಳ ಭಾಂಡಾರವಾದ ಭಾರತೀಯ ಮನಸ್ಸಿನ ವಿಶಿಷ್ಟ ಎರಕವೇ ಈ ದೇಶದ ಶಿಕ್ಷಣದ ಬುನಾದಿ ಆಗಬೇಕೆಂದು ನಿವೇದಿತಾ ಹಾಗೂ ಅರವಿಂದರಂತಹ ಚಿಂತಕರು ಹೇಳುವರು. ಆದರೆ ಸ್ವಾತಂತ್ರ್ಯಾನಂತರದ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಳೀಯವಾದದ್ದನ್ನು ಕೀಳು ಮಾಡುವುದೇ ಮುಖ್ಯವಾಗಿ, ನಮ್ಮ ಬುದ್ಧಿಜೀವಿಗಳು ವಿದೇಶೀ ಚಿಂತನೆಗಳನ್ನು ವಿಧೇಯರಾಗಿ ಒಪ್ಪಿಕೊಂಡರು. ನಮ್ಮ ಹಳತು ಬಂಧನ, ಜಾಗತಿಕವಾದದ್ದು ಸ್ವಾತಂತ್ರ್ಯ. ನಮ್ಮದನ್ನು ದ್ವೇಷಿಸುವುದೇ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆವ ಮಾರ್ಗ. ಸ್ವಂತ ಸಂಸ್ಕೃತಿಯನ್ನು ದ್ವೇಷಿಸುವ, ಆತ್ಮಗೌರವವಿಲ್ಲದ ದೇಶದವರನ್ನು ಇತರ ದೇಶಗಳವರು ಗೌರವಿಸರು ಎಂಬುದನ್ನು ಮರೆಯುವ ಮಾರ್ಗ ಇದು. ಆಂಗ್ಲಮಾಧ್ಯಮಗಳ ಎಳೆಯರನ್ನು ನೋಡಿದರೆ ಇಂತಹ 'ಸಾಂಸ್ಕೃತಿಕ ನಿರ್ಜಲೀಕರಣ'ಕ್ಕೆ ಹೇಗೆ ಅವರ ಮನಸ್ಸು ಒಳಗಾಗಿದೆ ಎಂದು ತಿಳಿಯುತ್ತದೆ. ಹಣಗಳಿಕೆ, ಜೀವನೋಪಾಯಗಳೇ ಗುರಿಯಾಗಿರುವ ಶಿಕ್ಷಣವೇ ಅವರ ದ್ರೋಹಕ್ಕೆ ಕಾರಣ. ವಿದೇಶೀಯಳಾದ ಸೋದರಿ ನಿವೇದಿತಾ ಅಗಾಧವಾದ ರಚನೆಗಳನ್ನುಳ್ಳ ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ತನ್ನ ಪ್ರಾಣವನ್ನೇ ಮುಡಿಪಾಗಿಟ್ಟುದು ಈ ಬಗ್ಗೆ ಏನನ್ನೂ ತಿಳಿಯಲು ಪ್ರಯತ್ನವನ್ನೇ ಪಡದ ಈ ಎಳೆಯರಿಗೆ ಹೇಗೆ ತಾನೇ ಅರ್ಥವಾದೀತು? ನಿವೇದಿತಾ ಹೇಳುವ 'ಇಡೀ ಸಮಾಜಕ್ಕೆ ಸಾಮಾನ್ಯವಾಗಿರುವ ವಿಶಿಷ್ಟ ಯೋಚನೆ, ಕಲ್ಪನೆಗಳ ಭಾಂಡಾರ', ಅರವಿಂದರು ತಿಳಿಸುವ 'ಪಿತ್ರಾರ್ಜಿತ ಧಾರಣ ಸಾಮರ್ಥ್ಯ', ಅವರ ಶಿಷ್ಯೆ ತಾಯಿಯವರು 'ಭಾರತವು ವಿಶ್ವದ ಜೀವಂತ ಆತ್ಮ, ಭಾರತವೇ ವಿಶ್ವದ ಗುರು' ಎಂದುದು ಭಾರತೀಯ ಶಿಕ್ಷಣದ ಬುನಾದಿ ಏನಿರಬೇಕೆಂಬುದನ್ನು ಸೂಚಿಸುತ್ತದೆ. ಭಾರತೀಯನಾಗಿ ಹುಟ್ಟಿ, ಶ್ರದ್ಧೆಯಿಂದ ಈ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯವನ್ನು ಪಡೆದು, ವಿನೀತನಾಗಿ ಋಷಿಋಣವನ್ನು ತೀರಿಸಲು ಸಾಧನೆ ಮಾಡುವುದೇ ಅಂತಹ ಶಿಕ್ಷಣದ ಪರಮೋದ್ದೇಶ. ನಿವೇದಿತಾ ಇದನ್ನು ಹೀಗೆ ಹೇಳುತ್ತಾಳೆ: ''ತಮ್ಮ ತಮ್ಮ ಸಮಸ್ಯೆಗಳನ್ನು ಎದುರಿಸಲು ರಾಷ್ಟ್ರೀಯ ಮನೋಭಾವವನ್ನು ಹೇಗೆ ತರಬೇಕೆನ್ನುವುದನ್ನು ಜರ್ಮನಿ ಹಾಗೂ ಅಮೆರಿಕಾ ಬಲ್ಲುದು. ಅಂದರೆ, ಅವರು ಸಾಮಾನ್ಯ, ಜನಪ್ರಿಯ ಮನೋಭಾವವನ್ನು ಸಂಘಟಿಸಿ, ಈ ಸಂಘಟಿತ ಮನಸ್ಸಿಗೆ... ತಂತಮ್ಮ ದೇಶದ ಅಭ್ಯುದಯ ಮತ್ತು ಸುಸ್ಥಿತಿಯನ್ನು ಸಾಧಿಸುವ ಜಟಿಲ ಸಮಸ್ಯೆಯನ್ನು ನೀಡುವರು.''

ಈಚಿನ ಭಾರತದಲ್ಲಿ ಇದಕ್ಕೆ ವಿರುದ್ಧವಾದುದನ್ನೇ ಕಾಣಬಹುದು. ವಿದೇಶೀ ಸಿದ್ಧಾಂತಗಳು, ವೋಟ್ ಆಧರಿತ ವಿಘಟನೆ, ಕೃತಕ ಜೀವನದ ಮೋಹಕತೆ, ಕೀಳು ಆರ್ಥಿಕ ನಿರ್ವಹಣೆ, ಕೆಳಹಂತದ ಬಡವರು ಜೀವನವನ್ನು ನೋಡುವ ಬಗೆಗೆ ಗಮನವನ್ನೇ ನೀಡದಿರುವುದು – ಈ ಶಕ್ತಿಗಳೆಲ್ಲ ರಾಷ್ಟ್ರೀಯ ಮನೋಭಾವವು ಹರಳುಗಟ್ಟದಂತೆ ಮಾಡುತ್ತಿದೆ. ಇದಕ್ಕೆ ಸ್ವಲ್ಪ ಪ್ರಯತ್ನ ನಡೆಸಿದರೂ, 'ಜಾಗತಿಕ ಮನೋಭಾವ, ಧರ್ಮನಿರಪೇಕ್ಷ ಮನಸ್ಸು, ಪ್ರಗತಿಶೀಲ ಮನಸ್ಸು'ಗಳಿಗೆ ವಿರುದ್ಧ ಎಂದು ಖಂಡಿಸಲಾಗುತ್ತದೆ. ಈ ರೀತಿಯ ಜಾಗತಿಕ ಮನೋಭಾವದ ಪ್ರತಿಪಾದಕರು ತಮ್ಮ ಮನಸ್ಸನ್ನು ಪ್ರಭಾವಗೊಳಿಸಿರುವ ವಿದೇಶೀ ಶಕ್ತಿಗಳು ತಂತಮ್ಮ ರಾಷ್ಟ್ರೀಯ ಮನೋಭಾವದ ಬಲದಿಂದಲೇ ಹಾಗೆ ಮಾಡುತ್ತಿವೆ ಎಂಬುದನ್ನು ತಿಳಿಯಲಾರರು.

ಆದರೆ ಇಂತಹ ಸಾಮಾನ್ಯ ರಾಷ್ಟ್ರೀಯ ಮನೋಭಾವದ ಆಧಾರವಿಲ್ಲದೆ ಸಮಾಜವನ್ನು ಒಟ್ಟುಗೂಡಿಸಿ ಅಭಿವೃದ್ಧಿ ಸಾಧಿಸಲು ಆಗದು. ಭಾರತವನ್ನು ದುರ್ಬಲಗೊಳಿಸಲು ಬ್ರಿಟಿಷರಂತೆಯೇ ತಮ್ಮ ಸ್ವಂತ ಲಾಭಕ್ಕಾಗಿ ನಮ್ಮದೇ ಆದ ರಾಜಕೀಯ ಮತ್ತು ವೈಚಾರಿಕ ಶಕ್ತಿಗಳು ಪ್ರಜ್ಞಾಪೂರ್ವಕವಾಗಿ ವಿಘಟನೆಗಳನ್ನು ಹುಟ್ಟುಹಾಕುತ್ತಿವೆ; ಇದರ ಫಲವಾಗಿ ಸೃಷ್ಟಿಯಾದ ಸಮಸ್ಯೆಗಳಿಂದ ಅವು ಅಭಿವೃದ್ಧಿ ಹೊಂದುತ್ತಿವೆ. ಸಾಂಪ್ರದಾಯಿಕ ಭಾರತೀಯ ಸಮಾಜವು ಹೊರ ತೋರಿಕೆಯಲ್ಲಿ ಸಾಮಾಜಿಕ ವೈವಿಧ್ಯತೆ ಹೊಂದಿದ್ದರೂ, ಸನಾತನ ಸಂಸ್ಕೃತಿಯ ಅಂತರ್ಗತವಾದ ರಚನೆ ನಾಶವಾಗಿಲ್ಲ. ಕಾರಣ ನಮ್ಮ ಋಷಿಗಳು ತಮ್ಮದೇ ಮಾದರಿಯ ರಾಷ್ಟ್ರೀಯ ಮನೋಭಾವವನ್ನು ಸೃಷ್ಟಿಸಿರುವರು.

ನಮ್ಮಲ್ಲಿ ಅಂತರ್ಗತವಾದ ಈ ರಾಷ್ಟ್ರೀಯ ಮನೋಭಾವವನ್ನು ಸೂಚಿಸುವ ಮಂತ್ರವನ್ನು ಗುರುವು ಶಿಷ್ಯರಿಗೆ ಪ್ರತಿಜ್ಞಾಬೋಧನೆಗಾಗಿ ಬಳಸುವನು: '**ಸಮಾನೋ ಮಂತ್ರ ಸಮಿತಿಃ ಸಮಾನೀ ಸಮಾನಂ ಮನಃ ಸಹ ಚಿತ್ತಮೇಷಾಂ। ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ॥**' *(ಋಗ್ವೇದ, ೧೦.೧೯೧)* 'ನಿಮ್ಮ ಧ್ಯೇಯವು ಸಮಾನವಾಗಿರಲಿ; ನಿಮ್ಮ ಸಭೆಯು ಸಮಾನವಾಗಿರಲಿ; ನಿಮ್ಮೆಲ್ಲರ ವಿಚಾರಗಳು ಮತ್ತು ಮನಸ್ಸುಗಳು ಸಮಾನವಾಗಿದ್ದು, ಒಟ್ಟಾಗಿರಲಿ; ನಿಮ್ಮ ಮುಂದೆ ನಾನು ಸಮಾನವಾಗಿರುವ ಉದ್ದೇಶವನ್ನು ಇಡುತ್ತಿರುವೆನು; ನಿಮ್ಮ ಗುರಿಯಿಂದ ಮತ್ತು ನಿಮ್ಮ ಹೃದಯಗಳನ್ನು ಒಟ್ಟು ಮಾಡಿ ಪೂಜಿಸಿ; ನೀವೆಲ್ಲ ಜೊತೆಯಾಗಿ ಸಂತೋಷದಿಂದ ಜೀವಿಸುವಂತೆ ನಿಮ್ಮ ಮನಸ್ಸುಗಳು ಒಂದಾಗಿರಲಿ.') ಇಂತಹ ಪ್ರತಿಜ್ಞೆಯಲ್ಲಿ ಯಾವ ಧರ್ಮಯುದ್ಧ, ಇತರರ ಮೇಲೆ ಆಕ್ರಮಣ ಅಥವಾ ಜಿಹಾದ್‌ಗೆ ಕರೆ ನೀಡಿಲ್ಲ – ಭಾರತದ ಇತಿಹಾಸವೇ ಅದಕ್ಕೆ ಸಾಕ್ಷಿ. ಇಲ್ಲಿನ ಸಾಮಾನ್ಯ ಉದ್ದೇಶ ಎಲ್ಲರ, ಎಲ್ಲದರ ಆನಂದ– '**ಸರ್ವೇ ಭವಂತು ಸುಖಿನಃ ।**' ಇದಕ್ಕೆ ವ್ಯಕ್ತಿಗತ ಅಥವಾ ರಾಷ್ಟ್ರೀಯ ಅಹಂಕಾರ ಅಥವಾ ತನ್ನನ್ನು ಮುಂದು ಮಾಡಿಕೊಳ್ಳುವ ಆಗ್ರಹ ಇಲ್ಲ. ನಿವೇದಿತಾ ಇಂತಹ ರಾಷ್ಟ್ರೀಯ ಮನೋಭಾವದಲ್ಲಿ ಇರುವ ವಿಶ್ವಾತ್ಮಕತೆಯನ್ನು ಗುರುತಿಸಿದಳು. ಆದರೆ ಆಕೆ ಈ ರಾಷ್ಟ್ರೀಯ ಮನೋಭಾವದ ಸಮಾನ ಮನಸ್ಸು ಶಕ್ತ, ಸಮರ್ಥವಾಗಲು ನಾಗರಿಕ ಆದರ್ಶಗಳು ಮತ್ತು ಜವಾಬ್ದಾರಿಯನ್ನೂ ಮೈಗೂಡಿಸಿಕೊಳ್ಳಬೇಕೆಂದು ಆಶಿಸಿದ್ದಳು. ಆದರೆ ಇಂತಹ ಪುನುರುಜ್ಜೀವನದಲ್ಲಿ ಅದರ ವಿಶ್ವಾತ್ಮಕತೆ, ಅನನ್ಯತೆಗಳು ಕಳೆದುಹೋಗಬಾರದಷ್ಟೇ.

ಸರಿ, ಈ ಬದಲಾವಣೆಗಳನ್ನು ತರುವವರಾರು? ಎಳೆಯರ ಹಾಗೂ ಪ್ರೌಢರ ಮನಸ್ಸನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಗೊಳಿಸಲು ಶಕ್ತವಾದ ಸಮೂಹ ಮಾಧ್ಯಮಗಳು, ಸರಕಾರ ಮತ್ತು ಖಾಸಗಿ ಸಂಸ್ಥೆಗಳು ಹೊರಟು ನಿಂತ ಅಭಿವೃದ್ಧಿಯ ಬಂಡಿಯಲ್ಲಿ ಕಾಲೂರಲು ಜಾಗ ಹುಡುಕುವಂತೆ ನಮ್ಮನ್ನು ಒತ್ತಾಯಪಡಿಸುತ್ತಿವೆ. ಇಂತಹ ಸನ್ನಿವೇಶವನ್ನು ನಿವೇದಿತಾ ಮೊದಲೇ ಊಹಿಸಿದ್ದಳು. ಸಾಮಾನ್ಯ ರಾಷ್ಟ್ರೀಯ ಮನೋಭಾವವನ್ನು ತಮ್ಮಲ್ಲಿ, ಮಕ್ಕಳಲ್ಲಿ ಬೆಳೆಸುವ ಜವಾಬ್ದಾರಿಯನ್ನು ತಂದೆತಾಯಂದಿರು ವಹಿಸಬೇಕು. 'ಮನೆ ಗೆದ್ದು ಮಾರು ಗೆಲ್ಲು' ಎಂದಂತೆ. ಶಿಕ್ಷಣದ ಪರಿಣಾಮಕಾರಿ ತತ್ತ್ವವನ್ನು ವಿವರಿಸುವಾಗ ಆಕೆ ಮುಖ್ಯವಾದ ಎರಡು ಅಂಶಗಳನ್ನು ಹೇಳುತ್ತಾಳೆ:

೧) ''ಬಹುಸಂಖ್ಯೆಯ ಜನರನ್ನು ಸುಲಭವಾಗಿ ಮತ್ತು ಪರಿಣಾಮಕಾರಿಯಾಗಿ ವಿಮೋಚನೆಗೊಳಿಸಲು ಪರಿಚಿತ ಆದರ್ಶಗಳು ಮತ್ತು ರೂಪಗಳನ್ನು ಅವರೆದುರು ಇಡಬೇಕು. ರಾಷ್ಟ್ರೀಯ ಶಿಕ್ಷಣವು ಪರಿಚಿತ ಮೂಲಭೂತ ವಿಚಾರಗಳನ್ನು ಒಳಗೊಂಡಿರಬೇಕು. ಪ್ರಸ್ತುತಪಡಿಸುವ ಆದರ್ಶಗಳನ್ನು ಪ್ರಾಚೀನವಾದದ್ದರ ಉಡುಪಿನೊಳಗೆ ಸೇರಿಸಬೇಕು. ನಮ್ಮ ಕಲ್ಪನೆಗಳು ನಮ್ಮದೇ ಆದ ವೀರ ಸಾಹಿತ್ಯದ ಮೇಲೆ ರಚಿತವಾಗಬೇಕು. ನಮ್ಮ ಇತಿಹಾಸದ ಹಾಸು ಹೊಕ್ಕಿನಿಂದ ನಮ್ಮ ಭರವಸೆಯನ್ನು ನೆಯ್ದಿರಬೇಕು.'' ವಿಶ್ವದ ವಿದ್ಯಾವಂತರೆಲ್ಲ ಸೇರಿ ಚರ್ಚಿಸುವ ವೇದಿಕೆಯೊಂದು ರಚಿತವಾಗಬೇಕು. ಆದರೆ ಅಂತಹ ಬೌದ್ಧಿಕ ಸ್ವಾತಂತ್ರ್ಯ ತಾಯಿ ಮತ್ತು ತಾಯ್ನಾಡಿನ ಪ್ರೇಮವನ್ನು ಆಧರಿಸಿದ್ದರೆ ಮಾತ್ರ ಸಾಧ್ಯ ಎಂಬುದು ಅವಳ ಅನಿಸಿಕೆ. ಶಿಕ್ಷಣದ ಇಂತಹ ಆದರ್ಶಗಳು ಬ್ರಿಟಿಷರ ವಸಾಹತುವಿಗೆ ಸರಿ, ಈ ಆಧುನಿಕ ಕಾಲಕ್ಕೆ ಹೊಂದದು ಎಂದು ವಾದಿಸಬಹುದು. ಆದರೆ ಈಗಿನ ಶಿಕ್ಷಣದ ಅವಸ್ಥೆ ಹೇಗಿದೆ? ಸ್ವಲ್ಪವೂ ಪರಿಚಿತವಲ್ಲದ್ದನ್ನು ಎಳೆಯ ಮನಸ್ಸುಗಳಿಗೆ ಕಲಿಸಲಾಗುತ್ತಿದೆ. ನಮ್ಮ ಹಿಂದಿನದೆಲ್ಲ ವ್ಯರ್ಥ; ನಮ್ಮ ಚರಿತ್ರೆ ಎಂಬುದು ಇಲ್ಲ; ನಮ್ಮ ಮಹಾಕಾವ್ಯಗಳು ಬರೀ ಹಿಂಸೆ, ಮೋಸ, ಉತ್ಪ್ರೇಕ್ಷೆಗಳ ಮೂಟೆಗಳು; ವೇದಕಾಲೀನ ಹಿಂದುತ್ವ ಎಂದರೆ ಜಗಳಗಂಟಿ ದೇಶಭಕ್ತಿ. ಇಂತಹ ಖಾಲಿ ಪ್ರತಿಷ್ಠೆಗಳನ್ನು ಬಯಲಿಗೆಳೆಯುವುದು ಪ್ರಗತಿಶೀಲತೆ. ತಾಯ್ನಾಡಿನ ಪ್ರೇಮವನ್ನು ತ್ಯಜಿಸಿ ಜಾಗತಿಕ ಪ್ರೇಮವನ್ನು ರೂಢಿಸಿಕೊಳ್ಳುವುದು ವಿಮೋಚನೆ. ರಾಷ್ಟ್ರೀಯ ಮನಸ್ಸನ್ನು ಗುರುತಿಸಿ, ಅದಕ್ಕೆ ವಿರೋಧ ಎದುರಾದಾಗ ಶಿಕ್ಷಕರೂ ವಿದ್ಯಾರ್ಥಿಗಳೂ ಪ್ರತಿರೋಧ ತೋರಿದಾಗ ಮಾತ್ರ ಭಾರತ ತನ್ನ ಗತವೈಭವವನ್ನು ಮರಳಿ ಪಡೆಯುವುದು.

ಸಮಂಜಸವಾದ ಉದಾಹರಣೆಯೊಂದನ್ನು ನಿವೇದಿತಾ ನೀಡುತ್ತಾಳೆ: ಪಾಶ್ಚಾತ್ಯರಲ್ಲಿ ಆದರ್ಶ ನಾರಿ ಲಗ್ನವಾಗಲು ಒಪ್ಪಿಕೊಂಡ ಕನ್ಯೆ; ನಮ್ಮಲ್ಲಿ ಪತಿವ್ರತೆಯಾದ ಹೆಂಡತಿ. ಭಾರತದ ಮಕ್ಕಳಿಗೆ ಪಾಶ್ಚಾತ್ಯ ಕಲ್ಪನೆ ಅರ್ಥವಾಗದು. ನಿಜ ಶಿಕ್ಷಣದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಎಡೆ ಇಲ್ಲ. ಇದೇ ತಪ್ಪು ಶಿಕ್ಷಣ ಪಡೆದ ಭಾರತದ ಬುದ್ಧಿಜೀವಿಗಳನ್ನು ದಾರಿಗೆಡಿಸುತ್ತಿರುವುದು. ನಿವೇದಿತಾ ಎನ್ನುವಂತೆ ಭಾರತದ ಮಗುವಿಗೆ ಯುಧಿಷ್ಠಿರನ ಸತ್ಯನಿಷ್ಠೆಯನ್ನು ಕಲಿಸುವುದು ಸೂಕ್ತವೇ ಹೊರತು ವಾಷಿಂಗ್‌ಟನ್ನನದ್ದಲ್ಲ. ಆದರೆ ನಮ್ಮ ವಿಮೋಚಿತ ಶಿಕ್ಷಣತಜ್ಞರು ಯುಧಿಷ್ಠಿರ ಸುಳ್ಳುಗಾರನೆನ್ನುತ್ತಾರಲ್ಲ! ವಿದೇಶೀ ಮಗು ಇಲಿಯಡ್ ಒಡಿಸ್ಸಿಗಳಿಂದ ಆರಂಭಿಸಿ ವಾಟರ್ಲೂ ವಿಜಯ ಮುಂತಾಗಿ ಕಲಿತರೆ, ಭಾರತದ ಮಗುವಿಗೆ ಹಿಂಸೆಯ ಕತೆಗಳನ್ನುಳ್ಳ ಭಗವದ್ಗೀತೆ, ರಾಮಾಯಣ ಮಹಾಭಾರತಗಳಿಂದ ದೂರವಿರಬೇಕು ಎಂದು ಕಲಿಸುತ್ತಾರೆ.

೨) 'ನಾವು ಮಾನವನಿಗೆ ಭಾವನೆಗಳು ಮತ್ತು ಆಯ್ಕೆಗಳಲ್ಲಿ ತರಬೇತಿ ನೀಡದಿದ್ದರೆ, ಅವನು ಬಳಸಬಹುದಾದ ಕೆಲವು ಬೌದ್ಧಿಕ ಕಸರತ್ತುಗಳನ್ನು ಕಲಿತು ಹೊರಬೀಳುತ್ತಾನೆ. ಇವುಗಳಿಂದ ಆತ ಅನ್ನ ಸಂಪಾದಿಸಿಕೊಳ್ಳಬಲ್ಲ. ತನ್ನ ಜೀವವನ್ನೇ ಬಲಿಕೊಡಲು ಅಥವಾ ಹೃದಯವನ್ನು ತಟ್ಟಲು ಅವನಿಗೆ ಅಸಾಧ್ಯ.'

ಈ ಚಿತ್ರ ನಮ್ಮ ವೃತ್ತಿನಿರತರಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಇಂದಿನ ಪರಿಸ್ಥಿತಿಯನ್ನು ಹೇಗೆ ಆಗಲೇ ನಿವೇದಿತಾ ಮನಗಂಡಿದ್ದಳು! ಈ ಅವನತಿಯ ಬಗ್ಗೆ ಹೀಗೆನ್ನುತ್ತಾಳೆ: ''ಭಾವನೆಗಳ

ತರಬೇತಿಗಿಂತ ಹೆಚ್ಚಿನದು ಇಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿನ ಯಾವುದೇ ಒಂದು ಅಂಶಕ್ಕಿಂತ... ಉದಾತ್ತವಾಗಿ ಭಾವಿಸುವುದು ಮತ್ತು ಪ್ರಾಮಾಣಿಕವಾಗಿ, ಉನ್ನತವಾಗಿ ಆಯ್ಕೆಮಾಡುವುದು ಸಾವಿರ ಪಾಲು ಮುಖ್ಯ.'' ಆಯ್ಕೆ ಹೃದಯಕ್ಕೆ ಸಂಬಂಧಿಸಿದುದು. 'ಭಾವನೆ ಮುಖ್ಯವಾಗಿ ಸ್ಥಳೀಯತೆಗೆ ಸಂಬಂಧಿಸಿದುದು. ಪ್ರತಿಯೊಬ್ಬನ ಹೃದಯದಲ್ಲಿ ಅವನ ಸ್ವದೇಶವಿದೆ.' ಹೀಗೆ ನಿವೇದಿತಾಳ ಶಿಕ್ಷಣದ ತತ್ತ್ವ ಸ್ಥಳೀಯ ಪ್ರತಿಮೆಗಳು, ಪಾತ್ರಗಳು ಮತ್ತು ಪ್ರಕ್ರಿಯೆಗಳ ಮೂಲಕ ಸಾಧಿತವಾದ ಪರಿಶುದ್ಧ, ಉದಾತ್ತ ಭಾವನೆಗಳ ಮಿಶ್ರಣ. ಅರವಿಂದರೂ ಸಹ ''ಮಾನವನ ಅರ್ಥಿಕತೆ, ಬುದ್ಧಿಯ ಸ್ವಭಾವ ನೈತಿಕತೆಯ ಮೇಲೆ ನಿಂತಿದೆ. ನೈತಿಕವಾಗಿ, ಭಾವನಾತ್ಮಕವಾಗಿ ಸಂಪೂರ್ಣತೆ ಪಡೆಯದೆ ಅದರಿಂದ ವಿಚ್ಛೇದಿತವಾಗಿ ಬೌದ್ಧಿಕ ತರಬೇತಿಯಾಗಿ ನಿಲ್ಲುವ ಶಿಕ್ಷಣ ಮಾನವ ಅಭ್ಯುದಯಕ್ಕೆ ಹಾನಿಕರ... ಹೃದಯವೆಂದರೆ ಬುದ್ಧಿಯಲ್ಲ, ಬುದ್ಧಿಗೆ ಮಾತ್ರ ಬೋಧಿಸುವುದು ಹೃದಯವನ್ನು ಸುಧಾರಿಸಬೇಕೆಂದೇನೂ ಇಲ್ಲ'' ಎನ್ನುತ್ತಾರೆ. ನಿವೇದಿತಾಳ 'ಉದಾತ್ತವಾಗಿ ಭಾವಿಸುವ' ಸಂಸ್ಕೃತಿಯನ್ನು ಮೆಚ್ಚುವ ರವೀಂದ್ರನಾಥ ಠಾಕೂರರು ಇತರ ಪ್ರಾಣಿಗಳಿಗಿಂತಲೂ ಆಳವಾಗಿ ಮಾನವನು ತನ್ನ ವ್ಯಕ್ತಿತ್ವವನ್ನು ಪರಿಭಾವಿಸುತ್ತಾನೆ ಎನ್ನುತ್ತಾರೆ. ''ಜ್ಞಾನದಿಂದ ನಾವು ಶಕ್ತಿಯನ್ನು ಹೊಂದಬಹುದು ಆದರೆ ನಮಗೆ ಪೂರ್ಣತೆ ಬರುವುದು ಸಹಾನುಭೂತಿಯಿಂದ. ನಮಗೆ ಬರಿ ಮಾಹಿತಿಯನ್ನು ನೀಡುವುದು ಉನ್ನತವಾದ ವಿದ್ಯೆಯಲ್ಲ; ಅದು ನಮ್ಮ ಜೀವನ ಇತರ ಎಲ್ಲ ಅಸ್ತಿತ್ವದ ಜೊತೆ ಸಾಮರಸ್ಯ ಹೊಂದುವಂತೆ ಮಾಡುವುದು'' ಎಂಬುದು ಅವರ ಅಭಿಪ್ರಾಯ. ಈ ಸಹಾನುಭೂತಿ, ಸಾಮರಸ್ಯಗಳು ಘರ್ಷಣೆ, ಶೋಷಣೆಗಳನ್ನು ಕಡಿಮೆ ಮಾಡುವ ಮಾನವ ಹೃದಯದ ಉದಾತ್ತ ಭಾವನೆಗಳು. ವ್ಯಕ್ತಿತ್ವದ ಬೆಳವಣಿಗೆ ಎಂದರೆ ಮಾನವ ಜೀವನವನ್ನು ಎಳೆದೊಯ್ಯುವುದು ಆಸೆಯಾಗದೆ, ಉದ್ದೇಶವಾಗುವ ನೈತಿಕ ಜೀವನದತ್ತ ಹೋಗುವುದು; ಹೀನ ಭಾವನೆಗಳಿಗಿಂತ ಅಪೇಕ್ಷಣೀಯ ಭಾವನೆಗಳನ್ನು ಬೆಳೆಸಿಕೊಳ್ಳುವುದು. ಮಾಹಿತಿಯ ಸಂಗ್ರಹವೇ ಜ್ಞಾನವೆನ್ನಿಸಿಕೊಳ್ಳುತ್ತಿರುವ ಈ ಕಾಲದಲ್ಲಿ ನಮ್ಮ ಭಾವನಾತ್ಮಕ ದಿಕ್ಸೂಚಿಯನ್ನು ನಾವು ಕಳೆದುಕೊಂಡು, ಸಾಧನೆಯ ಉದ್ದೇಶವಿರುವ ನೈತಿಕ ಜೀವನಕ್ಕೆ ಮುಖ ತಿರುಗಿಸಿದ್ದೇವೆ. ನಿವೇದಿತಾ ಇಚ್ಛೆಯನ್ನು ಭಾವನೆಯ ಸಂವಾದಿ ಪದವನ್ನಾಗಿ ಬಳಸುತ್ತಾಳೆ: ''ಇಚ್ಛೆಯನ್ನು ಉದಾತ್ತಗೊಳಿಸಿದರಷ್ಟೇ ಸಾಲದು; ಅದನ್ನು ನೈಜ ವಿದ್ಯಾಭ್ಯಾಸದ ಆದರ್ಶವನ್ನು ಸಾಧಿಸಲು ಪರಿಣಾಮಕಾರಿಯನ್ನಾಗಿಸಬೇಕು... ಘನತೆಯಿಲ್ಲದ ದಕ್ಷತೆ ನಿರುಪಯುಕ್ತವಷ್ಟೇ ಅಲ್ಲ, ವಿನಾಶಕರ. ದಕ್ಷತೆ ಇಲ್ಲದ ಘನತೆ ಎಷ್ಟೋ ಮೇಲು.''

ಈ ಉದಾತ್ತ ಇಚ್ಛೆ ನಮ್ಮ ವ್ಯಕ್ತಿತ್ವದಲ್ಲಿ ಸೇರಿಹೋಗಲು ಕೃತಜ್ಞತೆ ಎಂಬ ಉಚ್ಚ ಭಾವನೆ ಸಹಕಾರಿ. ನಮ್ಮ ಬಲಿದಾನಕ್ಕೂ ಎಡೆಕೊಡುವಷ್ಟು, ಬಹುಜನರನ್ನು ಉದ್ದೀಪಿಸುವಷ್ಟು ದೇಶಭಕ್ತಿ ನಮ್ಮನ್ನು ತುಂಬಿಕೊಳ್ಳಲು ಪ್ರಯತ್ನಪೂರ್ವಕ ಇಚ್ಛೆ ಆವಶ್ಯಕ. ಮೇಲುಮೇಲಿನ ಉದಾತ್ತ ಭಾವನೆಗಳು ಕೆಲಸಕ್ಕೆ ಬಾರದವು; ಪ್ರಜ್ಞಾಪೂರ್ವಕ ಇಚ್ಛೆ ಮಾತ್ರ ಅವನ್ನು ಕ್ರಿಯಾಶೀಲವಾಗುವಂತೆ ಮಾಡಬಲ್ಲುದು. ಇದನ್ನೇ ಅರವಿಂದರು ತಪಸ್ಸು, ಶಕ್ತಿ ಎನ್ನುವರು. ನಿವೇದಿತಾ ಇಚ್ಛೆಯನ್ನು ಭಾವನೆಗಳ ಕಾವಲುಬುರುಜು ಎಂದು ಭಾವಿಸುತ್ತಾಳೆ. ಹೃದಯದ ಗುಣ ಇದು, ತಲೆಯದಲ್ಲ. ಅವಳ ಪ್ರಕಾರ ನೈಜ ಶಿಕ್ಷಣದಲ್ಲಿ ದಕ್ಷತೆಯ ಮೂಲವಾದ ತಲೆಗೆ ಎರಡನೆಯ ಸ್ಥಾನವಿದೆಯಷ್ಟೇ. ಇಚ್ಛೆಯು ಷಡ್‌ರಿಪುಗಳನ್ನು ಎದುರಿಸಲು, ಕೀಳು ಭಾವನೆಗಳನ್ನು ನಿಯಂತ್ರಿಸಲು ಮತ್ತು ಕಡಿಮೆ ಮಾಡಲು ಅತ್ಯವಶ್ಯ.

ನಿವೇದಿತಾ ಹೇಳುವಂತೆ, ''ಶಿಕ್ಷಣದಲ್ಲಿ ವಿಧಾನಕ್ಕಿಂತ ಅದರ ಹಿಂದಿರುವ ಮನಸ್ಸನ್ನು ಮೊದಲು ರೂಪಿಸಬೇಕೆಂದು ಹಿಂದುವು ತಿಳಿದಿದ್ದು ಭಾರತೀಯ ಸಂಸ್ಕೃತಿಯ ಅದೃಷ್ಟ... ನೇರವಾಗಿ ಮನಸ್ಸನ್ನು ಏಕಾಗ್ರತೆ ಹೊಂದುವಂತೆ ತರಬೇತಿಗೊಳಿಸುವ ಬ್ರಾಹ್ಮಣ ವಿಧಾನ ಇರುವ ತನಕ ಭಾರತೀಯರು ಬದಲಾಗುವ ಯುಗಗಳ ತೊಂದರೆಗಳನ್ನು ಎದುರಿಸುವಲ್ಲಿ ಸಮರ್ಥರು... ಮನಸ್ಸನ್ನೆ ಸಂಸ್ಕರಿಸಿ, ಅಭಿವೃದ್ಧಿಪಡಿಸುವುದನ್ನು ನಮ್ಮ ಹಿರಿಯರು ಎಂದೂ ಉದಾಸೀನ ಮಾಡಲಿಲ್ಲ. ಮನಸ್ಸನ್ನು ನಿಯಂತ್ರಿಸುವ ಮತ್ತು ಅದೇ ಸ್ವನಿರ್ದೇಶ ಹೊಂದುವ ಈ ರಾಷ್ಟ್ರೀಯ ಪ್ರಯತ್ನದ ಚರಿತ್ರೆಯಲ್ಲಿ ಉದ್ಭವವಾದ ಮಹಾತ್ಮರು ಕೇವಲ ಕೆಲವು ಪ್ರಾಸಂಗಿಕ ಘಟನೆಗಳಷ್ಟೇ.'' ಇಂತಹ ಸ್ಪಷ್ಟ ಭಾವನಾತ್ಮಕ ಸ್ಪಷ್ಟೀಕರಣ ನಮಗೆ ಭಾರತೀಯ ಸಂಪ್ರದಾಯದಲ್ಲಿ ಹುಡುಗ ಹುಡುಗಿಯರ ದೈನಂದಿನ ಜೀವನದಲ್ಲಿ ಹಾಸುಹೊಕ್ಕಾಗಿರುವ ಚಿಕ್ಕ ದೊಡ್ಡ ಆಚರಣೆಗಳ, ಪ್ರಕ್ರಿಯೆಗಳ ಸರಪಳಿಯ ಮೌಲ್ಯವನ್ನು ಕಾಣುವಂತೆ ಮಾಡುತ್ತದೆ. ಈ ಸಂಪ್ರದಾಯಗಳ ಬಗೆಗಿನ ಅಶ್ರದ್ಧೆಯು ಉದಾರ ಶಿಕ್ಷಣದ ಮುಸುಕನ್ನು ಹೊದ್ದ ದುಷ್ಪ್ರೇರಣೆಯಿಂದ ಹುಟ್ಟಿದ್ದು, ನಮ್ಮ ದೇಶದ ಮನೆಗಳಲ್ಲಿ ಹಾಗೂ ಹೊರಗೆ ಕಾಣುತ್ತಿರುವ ಅಶಿಸ್ತು ಮತ್ತು ಅಶ್ಲೀಲತೆಗಳಿಗೆ ಕಾರಣವಾಗಿದೆ. ಇದಕ್ಕೆ ಮದ್ದಾಗಿ ನಿವೇದಿತಾ ಹೇಳುವ ರಾಷ್ಟ್ರೀಯ ಪ್ರಯತ್ನವು ಮತ್ತೊಮ್ಮೆ ಹಿಂದಿರುಗಬೇಕಿದೆ.

ಪ್ರಾಣಾಯಾಮ, ಧ್ಯಾನ, ಜಪ ಮೊದಲಾದುವು ಮಾನಸಿಕ ಶಿಸ್ತಾಗಿದ್ದು, ಇಚ್ಛೆಯನ್ನು ಗಟ್ಟಿಗೊಳಿಸುತ್ತವೆ. ಅಹಂಕಾರ ತಗ್ಗಿಸಿ, ವಿನಯವನ್ನು ಹೆಚ್ಚಿಸುವ ಭಾವನೆಯ ಶೋಧನೆಯನ್ನು ಇವುಗಳೊಂದಿಗೆ ಸೇರಿಸಬಹುದು. ನಿವೇದಿತಾ ಗುರುತಿಸುವಂತೆ ಬ್ರಾಹ್ಮಣೀಯ ಶಿಕ್ಷಣ ಸಿದ್ಧಾಂತದ ಹಿರಿಮೆ ಇಲ್ಲಿದೆ. ''ಬೇರೆ ರೀತಿಯಲ್ಲಿ ಹೇಳುವುದಾದಲ್ಲಿ, ಶಿಕ್ಷಣವು ಇಚ್ಛೆಯ ಮೇಲೆ ಪರಿಣಾಮ ಬೀರಿ, ಹೃದಯ ಮತ್ತು ಬುದ್ಧಿಯನ್ನು ವಿಧೇಯ ಸೇವಕರನ್ನಾಗಿಸಿ ಪ್ರತಿಷ್ಠಾಪಿಸುತ್ತದೆ.'' ನಿಯತವೂ ಕಠಿನವೂ ಆದ ತರಬೇತಿಯಿಂದ ಮನಸ್ಸಿನಲ್ಲಿ ಇಚ್ಛೆ ಹಾಗೂ ಭಾವನಾ ಶಕ್ತಿಗಳನ್ನು ಬೆಳೆಸುವುದೇ ಶಿಕ್ಷಣ ಎಂಬ ಭಾವನೆ ಸೋದರಿ ನಿವೇದಿತಾಳದು. ತರಬೇತಿ

ಗೊಳಿಸಿದ ಗಮನದ ಹಾಗೂ ಏಕಾಗ್ರತೆಯ ಶಕ್ತಿ; ಕೊಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಯೋಚಿಸುವ ಅರ್ಹತೆ ಹಾಗೂ ಅತ್ತಿತ್ತ ಹೋಗದಂತೆ ಸರಿಯಾಗಿ ಹಾಗೂ ಪರಿಣಾಮಕಾರಿಯಾಗಿ ಇಚ್ಛೆಯನ್ನು ಬಳಸುವ ಶಕ್ತಿಯೇ ಶಿಕ್ಷಣ ಎನ್ನುತ್ತಾಳೆ ನಿವೇದಿತಾ. ಹೀಗೆ ಶಿಕ್ಷಣದ ಬಗೆಗಿನ ಪೂರ್ಣ ಸತ್ಯವಿದು: ಏಕಾಗ್ರತೆ, ಪಟ್ಟುಹಿಡಿಯುವಿಕೆ, ಸರಿಯಾದ ಇಚ್ಛೆ. ಈ ಎಲ್ಲವೂ ಸಾರ್ವತ್ರಿಕವಾಗಿದ್ದರೂ, ಇಚ್ಛೆ ಪ್ರಮಾಣಕವೂ ಆಗಿದೆ. ಭಾರತೀಯ ಸಂಸ್ಕೃತಿಯಲ್ಲಿನ ಅನುಭವದ ಖಚಿತತೆ ಮತ್ತು ವಿವೇಕಕ್ಕೆ ಈ ಮೂಲಾಂಶಗಳು ಸಂಗತವಾಗಿರಬೇಕು. ಅವಳ ಪ್ರಕಾರ ಶಿಕ್ಷಣದಲ್ಲಿ ಪೋಷಕರ ಪಾತ್ರ ಹಿರಿದು. ''ತಮ್ಮ ಮಕ್ಕಳು ಶಾಲೆಗೆ ಹೊರಟೊಡನೆ ತಂದೆತಾಯಂದಿರು ತಮ್ಮ ಕೆಲಸ ಮುಗಿಯಿತೆಂದು ಭಾವಿಸಬಾರದು. ಮನೆಯಲ್ಲಿ ನಿತ್ಯವೂ ಧರ್ಮದ ಬಗೆಗಿನ ಚಿಂತೆ ನೆಲೆಸುವಂತೆ ಮಾಡಬೇಕು. ಕುಟುಂಬ ಸಾಮರಸ್ಯ, ದಾನ, ಮಿತವ್ಯಯ, ಗೌರವ, ದೇಶದ ನಾಯಕರನ್ನು ಗೌರವಿಸುವ ಪರಂಪರೆ, ಪೌರಾಣಿಕ ಸಾಹಿತ್ಯದ ಕಣಜ ಮೊದಲಾದ ಭಾರತೀಯ ಆದರ್ಶಗಳನ್ನು ಪ್ರತಿನಿತ್ಯ ಮಾತಿನಲ್ಲಿ ತರುವುದಲ್ಲದೆ, ಅವುಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ತಿಳಿಸಬೇಕು. ಭಾರತವನ್ನು ಭಾರತವಾಗಿಸುವ ಎಲ್ಲವೂ ಭಾರತೀಯ ಮನೆಯಲ್ಲಿ ಹರಿಯುತ್ತ ಅದನ್ನು ಭಾರತೀಯವಾಗಿಸಬೇಕು... ಮಕ್ಕಳಿಗೆ ಸಿಗುವ ಉತ್ತಮ ಶಿಕ್ಷಣ ಎಂದರೆ ತಮ್ಮ ಪೋಷಕರೊಂದಿಗಿನ ಮಾತುಕತೆಯೇ.''

ಈ ಮೇಲಿನ ಹೇಳಿಕೆ ಇಂದಿನ ನಮ್ಮ ಮನೆಗಳ ವಾಸ್ತವ ಚಿತ್ರಣವನ್ನು ನೆನಪಿಸಿ, ಆತಂಕವನ್ನೆಬ್ಬಿಸಬಹುದು. ಮೇಲ್ವರ್ಗದವರಂತೂ ನಾವೇನು ಮಾಡಬೇಕೆಂದು ನಿವೇದಿತಾ ಹೇಳುವಳೋ ಅದರ ವಿರುದ್ಧ ದೂರ ಬಂದುಬಿಟ್ಟಿರುವರು. ಧರ್ಮವೆಂದರೆ ಅವರು ಸಾಂಸ್ಥಿಕವಾಗಿದ್ದು, ಮೂಢಸಂಪ್ರದಾಯಗಳಿಂದ ಇಡಿಕಿರಿದ ಇಂಗ್ಲಿಷ್ ಪದದ ಅರ್ಥವನ್ನು ಪರಿಭಾವಿಸುವರು. ಉಪಭೋಗೀ ಸಂಸ್ಕೃತಿ ಎಷ್ಟು ಬಲವಾಗಿದೆ ಎಂದರೆ, ಜೀವನ ಮಟ್ಟದ ಏರಿಕೆ ಎಂದರೆ ಹೆಚ್ಚು ವಸ್ತುಗಳನ್ನು ಕೊಳ್ಳುವುದು ಎಂದಾಗಿದೆ. ಅವರ ನಾಯಕರಾಗಿ ಭಾರತದ ವೀರರಿಲ್ಲ; ನೆಪೋಲಿಯನ್, ಚರ್ಚಿಲ್, ಕೆನಡಿಗಳು ಅವರ ಹಾಗೂ ಅವರ ಮಕ್ಕಳ ಪ್ರಜ್ಞೆಯನ್ನು ಆವರಿಸಿದ್ದಾರೆ. 'ಆಲಿಸ್ ಇನ್ ದಿ ವಂಡರ್‌ಲ್ಯಾಂಡ್' ಪರಿಚಿತವಾದಷ್ಟು ಪುರಾಣ, ಪಂಚತಂತ್ರಗಳಲ್ಲ. ಘಟಕವಾಗಿ ಕುಟುಂಬವೇ ನಶಿಸುತ್ತಿರಲು ಅವಿಭಕ್ತ ಕುಟುಂಬ ಕನಸು. ತಂದೆ ತಾಯಿಗಳಿಬ್ಬರೂ ಬೆಳಗ್ಗೆ ಲಕ್ಕೆ ಮನೆ ಬಿಟ್ಟರೆ ಹಿಂದಿರುಗುವುದು ಸಂಜೆ ಲಕ್ಕೇ. ಆಮೇಲೂ ಟಿ.ವಿ. ಕೊಳೆ ಮನಸ್ಸನ್ನು ತುಂಬಿಕೊಳ್ಳುವುದು. ತಂದೆ ತಾಯಿ ಮಾತನಾಡುವುದು ಹಣದ ಬಗ್ಗೆ, ಜಗಳ, ಆಫೀಸು ರಾಜಕೀಯ, ನೆರೆಹೊರೆಯ ಗೊಡ್ಡು ಹರಟೆ. ಹೀಗೆ ವ್ಯಕ್ತಿತ್ವ ಕುಬ್ಜವಾಗುತ್ತ ನಡೆದರೆ ಭಾರತದ ಭವಿಷ್ಯವೇನು? ನಾಯಿಕೊಡೆಗಳಂತೆ ಬೆಳೆಯುತ್ತಿರುವ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲುಗಳು ಈ ಶೂನ್ಯವನ್ನು ಹೇಗೆ ತುಂಬಿಯಾವು? ವೃತ್ತಿಪರ ತಂದೆ ಪೂರ್ವದಲ್ಲಿ, ವೃತ್ತಿಪರ ತಾಯಿ ಉತ್ತರದಲ್ಲಿ ಇದ್ದು, ಮಗು ದಕ್ಷಿಣ ಭಾರತದ ದುಬಾರಿ ವಸತಿಶಾಲೆಯಲ್ಲಿ ಬೆಳೆಯುವುದು ಸಾಮಾನ್ಯ. ಹೀಗೆ ಅಣುಸಂಸಾರಗಳೂ ಕಾಣೆಯಾಗುತ್ತಿವೆ. ಮುಂದೇನು?

ಎಳೆಯ ಮನಸ್ಸುಗಳು ಭಾರತದ ಇತಿಹಾಸವನ್ನು ಕಲಿಯುವ ವಿಧಾನದ ಬಗ್ಗೆ ನಿವೇದಿತಾ ಶತಮಾನದ ಹಿಂದೆ ಹೇಳಿದ್ದು ಇಂದಿಗೂ ಪ್ರಸ್ತುತ. ''ಮೂಲಭೂತವಾದ ಹಾದಿಯಿಂದ ಅದರ ಹೃದಯವನ್ನೇ ತಲುಪುವುದು ಈ ವಿಧಾನ: ನಮ್ಮ ದೇಶ ಬೆಳೆದು ಬಂದ ರೀತಿಯನ್ನು ಹಂತಹಂತವಾಗಿ ಪ್ರೀತಿಯಿಂದ ಅಧ್ಯಯನ ಮಾಡುವುದರಿಂದ ಮಾತ್ರ ಭಾರತದ ವಿಕಾಸ ಹಾಗೂ ಶಕ್ತಿ ಏನೆಂಬುದನ್ನು ತಿಳಿಯಬಹುದು.'' ''ಭಾರತೀಯ ಸಾಹಿತ್ಯದಲ್ಲಿ ಚರಿತ್ರೆ ಇಲ್ಲವೆಂದು ಇತರರು ಹೇಳುವರು. ಭಾರತವೇ ಸ್ವತಃ ಈ ಮಾದರಿಯ ಮೇರುಕೃತಿಯಾಗಿದೆ ಎಂಬುದನ್ನು ಮರೆಯಬಾರದು. ದೇಶವೇ ತನ್ನ ದಾಖಲೆ; ಭಾರತವೇ ಚರಿತ್ರೆಯಾಗಿದ್ದು ನಾವು ಹೇಗೆ ಅಧ್ಯಯನ ಮಾಡಬೇಕೆಂಬುದನ್ನು ಅರಿತುಕೊಳ್ಳಬೇಕು.'' ''ಭಾರತವೇ ಅದರ ಚರಿತ್ರೆ ಎಂದಾಗ, ಅದರ ಯಾತ್ರೆಯೇ ಅದನ್ನು ಅರಿತುಕೊಳ್ಳುವ ರೀತಿ ಎಂದಾಯಿತು. ಪ್ರಪಂಚವನ್ನು ಸುತ್ತಿದರೆ ನಮಗೆ ಏನನ್ನೂ ನೋಡಲಾಗದು ಅಥವಾ ನೋಡಿದ್ದು ಅಸತ್ಯವಾಗಿರಬಹುದು. ಏಕೆಂದರೆ ನಾವು ನೋಡಲು ಸಿದ್ಧರಾದುದನ್ನು ಮಾತ್ರ ನೋಡಬಹುದು.'' ''ಭಾರತದ ವಿಶೇಷತೆಯೆಂದರೆ ಇಲ್ಲಿನ ಎಲ್ಲ ಶ್ರೇಷ್ಠ ತತ್ತ್ವ-ಸಿದ್ಧಾಂತಗಳಿಗೂ ಅದನ್ನು ನಿರ್ವಹಿಸುವ ಸ್ಥಾನ ಹಾಗೂ ಸಂಪ್ರದಾಯ ಇರುವುದು. ಭಾರತೀಯ ಚಿಂತನ ಜಾಲದಲ್ಲಿ ಭಾರತವೇ ಏಕಕಾಲದಲ್ಲಿ ಆಧಾರವೂ, ಅದರ ವಿವರಣೆಯೂ ಆಗಿದೆ.'' ''ಯುಗಗಳು ಹಾಗೂ ಪರ್ವಗಳ ಹುಡುಕಾಟದಲ್ಲಿ ತಾಯಿ ಮತ್ತು ತಾಯಿನಾಡು ಅವುಗಳ ಹಿನ್ನೆಲೆಯಲ್ಲಿರುವುದನ್ನು ನಾವು ಮರೆಯಲಾಗದು.''

ಭಾರತದ ಅಂತಃಸತ್ವವು ಹೊರಚಿಮ್ಮುವಂತೆ ಮಾಡುವುದೇ ನನ್ನ ಗುರಿ; ಅದು ಹೇಗಾದರೂ ಆಗಲಿ, ನನ್ನ ಕುದಿಯುವ ಉತ್ಸಾಹ ಪಾಶ್ಚಾತ್ಯ ನಿಷ್ಪ್ರಯೋಜಕ ವಿಷಯಗಳ ಕಡೆ ಹರಿದು ವ್ಯರ್ಥವಾಗದಿರಲಿ. ಅದರ ಬದಲು ನಾನು ಆತ್ಮಹತ್ಯೆ ಮಾಡಿಕೊಳ್ಳುವುದೇ ಒಳ್ಳೆಯದು ಅನ್ನಿಸುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ ಭಾರತವೇ ನನ್ನ ಯಾತ್ರೆಯ ಪ್ರಾರಂಭ ಸ್ಥಳ, ಅದೇ ನನ್ನ ಗುರಿ! ಭಾರತ ಬೇಕಾದರೆ ಪಶ್ಚಿಮ ದೇಶಗಳನ್ನು ನೋಡಿಕೊಳ್ಳಲಿ.

ಭಾರತದಲ್ಲಿರುವ ಏಕತೆ ಭಾರತದ್ದೆ, ಅದಕ್ಕೆ ಅದರದೇ ಭವಿಷ್ಯವಿದೆ, ಅದರದೇ ಕಾರ್ಯವಿದೆ, ಅದರದೇ ಆದ ಶಕ್ತಿಯೂ ಇದೆ. ಅದು ಹೊರಗಿನವರ ಕೊಡುಗೆಯಲ್ಲ.

**–ಸೋದರಿ ನಿವೇದಿತಾ**